ಸಾಕ್ಷಿಯನ್ನು ಈಹೊತ್ತು ದಿನಾಂಕ : 06.03.2021 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಎಂ ವಿ ಸಿ ಆರ್ ವಕೀಲರಿಂದ :

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ . ನಾನು ಈಗಾಗಲೇ ಹಾಜರುಪಡಿಸಿದ ದಾಖಲೆಗಳನ್ನು ಹೊರತು ಪಡಿಸಿ ಸೈಟ್ ನಂಬರ್ 1 ಮತ್ತು 1 ಎ ಗೆ ಸಂಬಂಧಪಟ್ಟಿರುತ್ತವೆ ಎಂದು ಹೇಳಲಾದ ಬೇರೆ ದಾಖಲೆಗಳು ಇರುವುದಿಲ್ಲ . ನಿಪಿ 32 ಜಿಪಿಎನೊಂದಿಗೆ ಇರುವ ಪ್ರಮಾಣ ಪತ್ರದಲ್ಲಿರುವ ಸಹಿಗಳು ಪಾಪಯ್ಯ ಅಂತ ಇರುತ್ತದೆ . ಅವುಗಳನ್ನು ನಾವು ನಮಗೆ ಬೇಕಾದ ಹಾಗೆ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಅವು ಪಾಪಯ್ಯನ ಸಹಿ ಅಲ್ಲ ಎಂದರೆ ಸರಿಯಲ್ಲ. ಸೈಟ್ ನಂಬರ್ 1 ಮತ್ತು ಉಳಿಕೆ ಜಾಗ ಅಂತ ತೋರಿಸಲು ಮಂಜೂರಾದ ಲೇಔಟ್ ಪ್ಲಾನ್ ಇದೆ ಇಲ್ಲ ಗೊತ್ತಿಲ್ಲ.

2. ನಿಪಿ 33 ಪುಟ 2 ರಲ್ಲಿ ಕೆಳಗೆ ಇರುವ ಸಹಿ ಪಾಪಯ್ಯರವರದು ಇರುತ್ತದೆ . ಆದರೆ ಅಕ್ಷರಗಳ ನಡುವೆ ಅಂತರವಿದೆ ಎಂದರೆ ಸರಿ . ನಿಪಿ 33 ದಾಖಲೆಯನ್ನು ಮತ್ತು ಸಹಿಗಳನ್ನು ಈಗ ನಾವು ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 32 ಮತ್ತು 33 ದಾಖಲೆಗಳನ್ನು ಪಾಪಯ್ಯರವರು ವೆಂಕಟೇಶ್ ರವರಿಗೆ ಕೊಟ್ಟದ್ದನ್ನು ಸಾಕ್ಷಿದಾರರು ಸುನಂದಮ್ಮ ಮತ್ತು ನಾಗರೆಡ್ಡಿರವರು ಇರುತ್ತಾರೆ .

ಸದರಿ ದಾಖಲೆಗಳು ನಮ್ಮ ಸುಪರ್ದಿಗೆ ನಾನು ಸೈಟನ್ನು ತೆಗೆದುಕೊಂಡಾಗ ಬಂದಿರುತ್ತವೆ .

3. ವೆಂಕಟೇಶ್‌ರವರು ನನಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ . ನಿಪಿ 32 ಮತ್ತು 33 ದಾಖಲೆಗಳನ್ನು ನಾನು ಕ್ರಯಪತ್ರದೊಂದಿಗೆ ಕೊಡುತ್ತಿದ್ದೇನೆ ಎಂದು ನಿಪಿ 1 ಕ್ರಯಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರಿಗೆ ಈಗಾಗಲೇ ಮಾಡಿದ ಪಾಟೀಸವಾಲನ್ನು ಪುನಾರಾವರ್ತಿಸದಂತೆ ಸೂಚಿಸಲಾಗಿದೆ .

4. ನಿಪಿ 32 ಮತ್ತು 33 ದಾಖಲೆಗಳು ಈ ದಾವೆಯನ್ನು ದಾಖಲು ಮಾಡಿದಾಗ ಎಲ್ಲಿದ್ದವು ಎಂದರೆ ಸಾಕ್ಷಿಯು ದಾವೆಯನ್ನು ನನ್ನ ತಂದೆ ದಾಖಲು ಮಾಡಿದ್ದರು ಎಂದು ಹೇಳುತ್ತಾರೆ . ಸದರಿ ದಾಖಲೆಗಳು ಮನೆಯಲ್ಲಿ ಇದ್ದಿರಬಹುದು . ನಿಪಿ 32 ಮತ್ತು 33 ದಾಖಲೆಗಳನ್ನು ನನ್ನ ತಂದೆ ಬದುಕಿದ್ದಾಗ ಒಂದು ಫೈಲ್ ನಲ್ಲಿಟ್ಟಿದ್ದರು . ನನ್ನ ಕೈಗೆ ಕೊಟ್ಟಿರಲಿಲ್ಲ. ಆ ಕಾರಣಕ್ಕಾಗಿ ಪಾಪಯ್ಯರವರು ವೆಂಕಟೇಶ್‌ರವರಿಗೆ ಯಾವುದೇ ದಾಖಲೆಗಳನ್ನು ಅಂದರೆ ನಿಪಿ 32 ಮತ್ತು 33 ಅದರೊಂದಿಗೆ ಇರುವ ಪ್ರಮಾಣ ಪತ್ರ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಅದರಂತೆ ವೆಂಕಟೇಶ ರವರು ನಮ್ಮ ತಂದೆಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಪಾಟೀಸವಾಲು ಆದ ಮೇಲೆ ಸದರಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಬಂದಿರುತ್ತೀರಾ ಎಂದರೆ ಸುಳ್ಳು .

5. ಸದರಿ ದಾಖಲೆಗಳು ನನ್ನ ತಂದೆಯ ಬಳಿ ಇದ್ದಿದ್ದರೆ ನನಗೆ ಕೊಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಯಾಕೆ ಕೊಟ್ಟಿಲ್ಲ ಗೊತ್ತಿಲ್ಲ ಎಂದು ಹೇಳುತ್ತಾರೆ . ನಾನು ಅದರಂತೆ ಸೈಟ್ ನಂಬರ್ 1 ಮತ್ತು ಉಳಿಕೆ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಹೊಡೆಯುವ ಸಲುವಾಗಿ ಒಂದೊಂದೇ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸುತ್ತಿದ್ದೇನೆ ಎಂದರೆ ಸುಳ್ಳು .

ಮರು ವಿಚಾರಣೆ : ಇರುವುದಿಲ್ಲ.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .